**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.948/2016

| | |
|---|---|
| ಸಾಕ್ಷಿದಾರರ ಹೆಸರು | ವಿನಯ್ ಕುಮಾರ್ |
| ತಂದೆಯ ಹೆಸರು | ಲೇಟ್ ತಮ್ಮಣ್ಣ ಹೆಚ್ |
| ವಯಸ್ಸು | 32 ವರ್ಷ |
| ವೃತ್ತಿ | ಖಾಸಗಿ ಕೆಲಸ |
| ವಿಳಾಸ | ಚನ್ನಪಟ್ಟಣ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 08.01.2026 |

**<u>ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-</u>**

ಆರೋಪಿಯ ಪರಿಚಯ ಇರುತ್ತದೆ. ಈ ದಿನ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ. ಚಾಸಾ-1 ರಿಂದ 14 ರವರು ಯಾರು ಗೊತ್ತಿರುವುದಿಲ್ಲ.

ಪೋಲೀಸರು ನನ್ನ ಗಾಡಿ ಠಾಣೆಯಲ್ಲಿರುವುದಾಗಿ ತಿಳಿಸಿದರು. ಸುಮಾರು 9 ರಿಂದ 10 ವರ್ಷದ ಹಿಂದೆ ಈ ಸಂಬಂಧ ನಾನು ಠಾಣೆಗೆ ಹೋಗಿ ಗಾಡಿಯನ್ನು ಬಿಡಿಸಿಕೊಳ್ಳುವ ಸಂಬಂಧ ಬಾಂಡ್ ನ್ನು ಬರೆದುಕೊಟ್ಟಿರುತ್ತೇನೆ. ಗಾಡಿ ಅಪಘಾತವಾಗಿರುತ್ತದೆಂದು ತಿಳಿಸಿರುತ್ತಾರೆ. ಆದರೆ ಯಾರ ಕಾರಣದಿಂದ ಅಪಘಾತವಾಗಿರುತ್ತದೆಂದು ನನಗೆ ಗೊತ್ತಿರುವುದಿಲ್ಲ.

ಸಾಕ್ಷಿಗೆ ಈಗ ಇಂಡಿನಿಂಟಿ ಬಾಂಡ್ ತೋರಿಸಲಾಗಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-10 ಎಂದು ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿದಾರ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸ.ಸ ಅ ರವರು ಸಾಕ್ಷಿಯನ್ನು ವಾಟೀ ಸವಾಲನ್ನು ಮಾಡಲು ಅನುಮತಿ ನೀಡಲು ಕೋರಿದ ಮೇರೆಗೆ ಅನುಮತಿ ನೀಡಲಾಯಿತು).**

**ವಾಟೀ ಸವಾಲುಃ ಸ. ಸ. ಅ. ರವರಿಂದ**

ಪೋಲೀಸರು ದಿನಾಂಕ 21.05.2015 ರಂದು ನನ್ನನ್ನು ಮೌಖಿಕವಾಗಿ ಠಾಣೆಗೆ ಕರೆಯಿಸಿ ನನ್ನ ಗಾಡಿಯನ್ನು ಚಲಾಯಿಸುತ್ತಿದ್ದ ಆರೋಪಿ ಅಪಘಾತಪಡಿಸಿರುವುದಾಗಿ ತಿಳಿಸಿ ಸದರಿ ವಾಹನವನ್ನು ಬಿಡಿಸಿಕೊಳ್ಳುವ ಸಂಬಂಧ ನನ್ನ ಬಳಿ ಇಂಡಿನಿಂಟಿ ಬಾಂಡ್ ನ್ನು ಪಡೆದುಕೊಂಡಿರುತ್ತಾರೆಂದರೆ ಸರಿಯಲ್ಲ. ನನಗೆ ಎಲ್ಲಾ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ವಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಏನೂ ಇರುವುದಿಲ್ಲ**

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**